# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 559 |
| ಸದಸ್ಯರ ಹೆಸರು | : | ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19-07-2024 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯ ಪ್ರಮುಖ ಬೆಳೆಯಾದ ತೊಗರಿಗೆ 'ಜಿಐ' ಟ್ಯಾಗ್ ದೊರಕಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ; ಇದರಿಂದ ತೊಗರಿ ಬೆಳೆಗಾರರಿಗೆ ಆಗುವ ಲಾಭವೇನು; (ವಿವರ ನೀಡುವುದು) | ಬಂದಿದೆ.<br><br>ಕಲಬುರಗಿ ಜಿಲ್ಲೆಯ ಪ್ರಮುಖ ಬೆಳೆಯಾದ ತೊಗರಿಗೆ ಭೌಗೋಳಿಕ ಸೂಚ್ಯಂಕ (Geographical Identification - GI) ಟ್ಯಾಗ್ ದೊರೆತಿರುತ್ತದೆ. (ನೋಂದಣಿ ಸಂಖ್ಯೆ: 593 ದಿನಾಂಕ:14.08.2019)<br><br>ಭೌಗೋಳಿಕ ಸೂಚ್ಯಂಕ ಹೊಂದಿರುವ ಗುಲಬರ್ಗಾ ತೊಗರಿ ಬೇಳೆಯು ಬೇಯಲು ಕಡಿಮೆ ಸಮಯ ತೆಗೆದುಕೊಳ್ಳುತ್ತದೆ. ಒಳ್ಳೆಯ ಸುವಾಸನೆ ಹಾಗೂ ರುಚಿಯನ್ನು ಹೊಂದಿದೆ, ಕುದಿಸಿದ ಬೇಳೆ ಬೇಗ ಹಾಳಾಗುವುದಿಲ್ಲ. ಈ ಜಿಲ್ಲೆಯಲ್ಲಿನ ಮಣ್ಣು ಹೆಚ್ಚಿನ ಪ್ರಮಾಣದ ಕ್ಯಾಲ್ಸಿಯಂ ಹಾಗೂ ಪೊಟ್ಯಾಷಿಯಂನಿಂದ ಕೂಡಿದ್ದು, ಇದು ಅತ್ಯುತ್ತಮ ಗುಣಮಟ್ಟದ ತೊಗರಿಗೆ ಪ್ರಮುಖವಾಗಿದ್ದು, ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗಿದೆ. ತೊಗರಿ ಬೆಳೆಗೆ ಜಿಐ ಟ್ಯಾಗ್ ದೊರಕಿರುವುದರಿಂದ ಈ ಕೆಳಕಂಡ ಪ್ರಯೋಜನಗಳಾಗಿರುತ್ತವೆ.<br><br>• ಜಿ.ಐ ಟ್ಯಾಗ್ ದೊರಕಿರುವುದರಿಂದ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಈ ತೊಗರಿಯನ್ನು ಗುರುತಿಸಲಾಗುತ್ತಿದೆ. ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ಹೆಚ್ಚಿಸುವ ಮೂಲಕ ಜಿ.ಐ ಟ್ಯಾಗ್ ಸರಕುಗಳ ಉತ್ಪನ್ನಗಳು ಆರ್ಥಿಕ ಸಮೃದ್ಧಿಯನ್ನು ಉತ್ತೇಜಿಸುತ್ತದೆ ಹಾಗೂ ಈ ಭಾಗದಲ್ಲಿ ಬೆಳೆದ ತೊಗರಿಗೆ ಬೇಡಿಕೆ ಹೆಚ್ಚಾಗುತ್ತಿದೆ.<br>• ಜಿ.ಐ ಟ್ಯಾಗ್ ಬಳಕೆದಾರರು ಒಳ್ಳೆಯ ಗುಣಮಟ್ಟ ಮತ್ತು ದೃಢೀಕರಿಸಿದ ತಮ್ಮ ಉತ್ಪನ್ನಗಳಿಗೆ ಗಮನಾರ್ಹವಾಗಿ ಉತ್ತಮ ಬೆಲೆ ಪಡೆಯಲು ಸಹಾಯವಾಗುತ್ತದೆ.<br>• ಜಿ.ಐ ಟ್ಯಾಗ್ ಬಳಕೆಯಿಂದ ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸಿ ಸ್ಥಳೀಯ ಉತ್ಪನ್ನಗಳ ಖ್ಯಾತಿ ಮತ್ತು ಮೌಲ್ಯವನ್ನು ಹೆಚ್ಚಿಸಿ, ಸ್ಥಳೀಯ ವ್ಯಾಪಾರವನ್ನು ಬೆಂಬಲಿಸಿದಂತಾಗಿ ವ್ಯಾಪಾರ ವಿಸ್ತಾರಗೊಳ್ಳುತ್ತದೆ.<br>• ಜಿ.ಐ ಟ್ಯಾಗ್‌ನಿಂದ ಭಾರತೀಯ ಉತ್ಪನ್ನಗಳಿಗೆ ಕಾನೂನು ಖ್ಯಾತಿ, ಕಾನೂನು ರಕ್ಷಣೆ ಮತ್ತು ಗುಣಮಟ್ಟವನ್ನು ರಕ್ಷಿಸಿದಂತಾಗುವುದು. |

| | | |
|---|---|---|
| | | • ಅಪೇಕ್ಷಿತ ಗುಣಲಕ್ಷಣಗಳ ಗುಣಮಟ್ಟದ ಉತ್ಪನ್ನಗಳನ್ನು ಪಡೆಯಲು ಗ್ರಾಹಕರಿಗೆ ಸಹಾಯ ಮಾಡಿರುತ್ತದೆ ಮತ್ತು ದೃಢೀಕರಣದ ಭರವಸೆಯಿದೆ.<br>• ಇತರರಿಂದ ಜಿ.ಐ ಟ್ಯಾಗ್ ಉತ್ಪನ್ನಗಳ ಅನಧಿಕೃತ ಬಳಕೆಯನ್ನು ತಡೆಯುತ್ತದೆ.<br>ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಮೂಲಕ "ಭೀಮಾ ಫಲ್ಸಸ್" ಬ್ರ್ಯಾಂಡ್‌ನ ಅಡಿಯಲ್ಲಿ ಜಿ.ಐ ಟ್ಯಾಗ್ ತೊಗರಿಯನ್ನು ಪ್ರಚಲಿತಗೊಳಿಸಲು ಸರ್ಕಾರದ ಅನುಮೋದನೆ ನೀಡಲಾಗಿದ್ದು, ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಮಂಡಳಿ ಕಾರ್ಯನ್ಮೊಖವಾಗಿದೆ. |
| (ಆ) | ತೊಗರಿ ಬೆಳೆಗಾರರಿಗೆ ಉತ್ತೇಜನ ನೀಡಲು ಸರ್ಕಾರ ಯಾವುದಾದರು ವಿಶೇಷ ಯೋಜನೆ ಘೋಷಣೆ ಮಾಡುವ ಚಿಂತನೆ ಸರ್ಕಾರದ ಮುಂದಿದೆಯೇ? | ರಾಜ್ಯ ಸರ್ಕಾರದಿಂದ ತೊಗರಿ ಬೆಳೆಗಾರರಿಗೆ ಉತ್ತೇಜನ ನೀಡಲು ಪ್ರಸ್ತುತ ವಿಶೇಷ ಯೋಜನೆ ಘೋಷಣೆ ಮಾಡುವ ಯಾವುದೇ ಚಿಂತನೆ ಇರುವುದಿಲ್ಲ. ಪ್ರಸಕ್ತ ವರ್ಷದಲ್ಲಿ ತೊಗರಿ ಬೆಳೆಯಲ್ಲಿ ಕ್ಷೇತ್ರ ವಿಸ್ತರಣೆ, ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ಒತ್ತು ನೀಡಿದ್ದು, ಕೇಂದ್ರ ಪುರಸ್ಕೃತ – ಆಹಾರ ಮತ್ತು ಪೌಷ್ಠಿಕ ಭದ್ರತೆ ಯೋಜನೆಯ – ದ್ವಿದಳಧಾನ್ಯ ಕಾರ್ಯಕ್ರಮದಡಿ ನೂತನ ತಳಿಗಳ ಬಳಕೆಯಿಂದ ಸುಧಾರಿತ ಪದ್ಧತಿ ಪ್ರಾತ್ಯಕ್ಷಿಕೆ, ಧೃಡೀಕೃತ ಬಿತ್ತನೆ ಬೀಜಗಳ ವಿತರಣೆ, ಸಮಗ್ರ ಪೋಷಕಾಂಶಗಳು, ಪೀಡೆನಾಶಕಗಳು, ಸುಧಾರಿತ ಯಂತ್ರೋಪಕರಣಗಳು, ಹಸಿರೆಲೆ ಗೊಬ್ಬರ ಬೀಜಗಳ ವಿತರಣೆಯನ್ನು ಶೇ.50ರ ಸಹಾಯಧನದಲ್ಲಿ ರೈತರಿಗೆ ನೀಡಲಾಗುತ್ತಿದೆ.<br>ಪ್ರಸ್ತಕ ಸಾಲಿನಲ್ಲಿ ತೊಗರಿ ಬೆಳೆಯಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಲು ರಾಜ್ಯಾದ್ಯಂತ ತೊಗರಿಯನ್ನು ಮುಖ್ಯ ಬೆಳೆಯಾಗಿ ಹಾಗೂ ಇತರೆ ಬೆಳೆಗಳಲ್ಲಿ ಅಂತರ ಬೆಳೆಯಾಗಿ ಬೆಳೆಯಲು ವ್ಯಾಪಕ ಪ್ರಚಾರ ನೀಡಲಾಗುತ್ತಿದೆ.<br>ನೂತನ ತಳಿಗಳ ಕಿರು ಚೀಲಗಳನ್ನು ಉಚಿತವಾಗಿ ರೈತರಿಗೆ ವಿತರಿಸಿ ತೊಗರಿ ಬೆಳೆಯ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡಲು ಪ್ರೋತ್ಸಾಹಿಸಲಾಗುತ್ತಿದೆ.<br>ತೊಗರಿ ಬೆಳೆಯ ಉತ್ಪಾದನೆ ಹೆಚ್ಚಿಸಲು ಅವಕಾಶ ಇರುವ ಪ್ರದೇಶಗಳಲ್ಲಿ ತೊಗರಿ ಬೆಳೆಯನ್ನು ಮುಖ್ಯ ಬೆಳೆಯಾಗಿ, ರಾಗಿ ಮತ್ತು ಮೆಕ್ಕೆಜೋಳ ಬೆಳೆಗಳಲ್ಲಿ ಅಂತರ ಬೆಳೆಯಾಗಿ ಸಹ ಬೆಳೆಯಲು ರೈತರಿಗೆ ತರಬೇತಿ ಹಾಗೂ ಕ್ಷೇತ್ರೋತ್ಸವಗಳ ಮೂಲಕ ವ್ಯಾಪಕ ಪ್ರಚಾರ ನೀಡಲು ಕ್ರಮವಹಿಸಲಾಗಿದೆ. |

***ಕೃಇ 71 ಎಎಂಎಸ್ 2024***

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು